

ಕಲೆ: ಗುರು ನಾವಳ್ಳಿ

ಸಾಲಿ ರಾಮಚಂದ್ರರಾಯರ ಒಂದು ಡೈರಿ ಸಿಕ್ಕಿದೆ. ಸಾಲಿ ಅವರು ವಾಸಿಸುತ್ತಿದ್ದ, ಸಪ್ತಾಪುರದ 'ಶ್ರೀನಿಕೇತನ'ದ ಜಾಗವನ್ನು ಅವರ ಮೊಮ್ಮಕ್ಕಳು, ಸ್ವಲ್ಪ ಕಾಲದ ಮೊದಲು, ಮಾರಾಟ ಮಾಡಿದರು. ಆ ಸಂದರ್ಭದಲ್ಲಿ ಡಾ. ಶ್ರೀವತ್ಸ ದೇಸಾಯಿ ಅವರು ಇಂಗ್ಲೆಂಡ್‌ನಿಂದ ನನಗೆ ಫೋನಿಸಿದರು, 'ಅಜ್ಜನ ಜಾಗ ಮಾರಾಟವಾಗಿದೆ, 'ಶ್ರೀನಿಕೇತನ'ದಲ್ಲಿ ಇದ್ದ ಅಜ್ಜನ, ಡಾ. ಪಿ.ಬಿ. ದೇಸಾಯರ ಹಾಗೂ ಅಜ್ಜನ ದೊಡ್ಡ ಮೊಮ್ಮಗ ಶೀನಣ್ಣನ (ಶ್ರೀನಿವಾಸ ದೇಸಾಯಿ) ಕೆಲವು ಪುಸ್ತಕ ಮುಂತಾದುವನ್ನು ಅಲ್ಲಿಯೇ ಹಿಂಬದಿಯಲ್ಲಿ ವಾಸಿಸುತ್ತಿದ್ದ ಆನಂದಣ್ಣನ (ಡಾ. ಆನಂದ ದೇಸಾಯಿ) ಮನೆಯಲ್ಲಿ ಇಡಲಾಗಿದೆ, ನೀವು ಹೋಗಿ ಬೇಕಾದುವನ್ನು ತೆಗೆದುಕೊಳ್ಳಿರಿ' ಎಂದು ಸೂಚಿಸಿದರು.

ಮರುದಿನ ಬೆಳಗ್ಗೆ ಹೋದೆ. ಅಷ್ಟರಲ್ಲಿ, ಎರಡು ದಿನ ಮೊದಲೇ, ಒಂದಿಬ್ಬರು ಬಂದು, ಬಹಳಷ್ಟು ಸಾಮಗ್ರಿಯನ್ನು ಒಯ್ದಿದ್ದರು ಎಂದು ತಿಳಿಯಿತು. ಉಳಿದಿದ್ದ ಕೆಲವು ಕಾಗದ, ಪುಸ್ತಕ ಸಂಗ್ರಹಿಸಿ ಕೊಂಡೆ; ನಂತರ ಸಾಲಿ ಅಜ್ಜನ 'ಶ್ರೀನಿಕೇತನ'ದ ಬಾಗಿಲು ತೆಗೆಸಿಕೊಂಡೆ. ಅಲ್ಲಿಯೂ ಕಾಗದ, ಪುಸ್ತಕ ಹರವಿ ಬಿದ್ದಿದ್ದವು. ಅಜ್ಜ ದಿನಾ ನೂಲುತ್ತಿದ್ದ